**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.588/2023**

**CW - 3 PW-5**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸದ್ದಾಂ ಹುಸೇನ್ |
| ತಂದೆ | ಃ | ಪೀರ್ ಸಾಬ್ |
| ವಯಸ್ಸು | ಃ | 28 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಹಿರೇರಾಯಕುಂಪಿ |
| ಪ್ರಮಾಣಿಕರಿಸಿದ ದಿನಾಂಕ | ಃ | **09-01-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ದಿ. 30-04-2023 ರಂದು ಸಂಜೆ 05:30 ರಿಂದ 06:00 ರ ಅವಧಿಯಲ್ಲಿ ಪೊಲೀಸರು ಸ.ನಂ.163 ರಲ್ಲಿನ ಗುನ್ನೇ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿ 4 ಕಟ್ಟಿಗೆಗಳನ್ನು ಅಮಾನತು ಪಡಿಸಿಕೊಂಡು ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೇ ಇರುವ 4 ಕಟ್ಟಿಗೆಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ 1 ರಿಂದ 4 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲು:-</u> ಆರೋಪಿತರ ಪರ ಶ್ರೀ. ಎ.ಪಿ ವಕೀಲರಿಂದ.**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಕೇವಲ ಸಹಿ ಮಾಡುತ್ತೇನೆ. ಸದ್ದಾಂ ಹುಸೇನ ಎಂದು ಸಹಿ ಮಾಡುತ್ತೇನೆ. ನನ್ನ ಸ್ವಂತ ಊರು ಹಿರೇರಾಯಕುಂಪಿ ಆಗಿರುತ್ತದೆ. ನನ್ನ ಜಮೀನು ಸ.ನಂ. 102 ಆಗಿರುತ್ತದೆ. ನನ್ನ ಜಮೀನು 02 ಎಕರೆ ಇರುತ್ತದೆ. ಸದರಿ ಜಮೀನು ನನ್ನ ತಂದೆ ಪೀರ್ ಸಾಬನ ಹೆಸರಿನಲ್ಲಿ ಇರುತ್ತದೆ. ಪಂಚನಾಮೆಯನ್ನು ಪೊಲೀಸರು ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ.

ವಕೀಲರು ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಸಾಕ್ಷಿಗೆ ಪ್ರಶ್ನೆ ಮಾಡಿದ್ದು ಸದರಿ ಪ್ರಶ್ನೆಯನ್ನು ಕೇಳಲು ಬರುವುದಿಲ್ಲ ನಿಖರವಾದ ಪ್ರಶ್ನೆಗೆ ಕೇಳುವಂತೆ ನ್ಯಾಯಾಲಯ ಹೇಳಿದ್ದು ಪುನ: ಅದೇ ಪ್ರಶ್ನೆಯನ್ನು ಮಾಡಿದ್ದರಿಂದ ಅವರ ಪ್ರಶ್ನೆಯನ್ನು ತಳ್ಳಿ ಹಾಕಿರುತ್ತದೆ.

ಪಂಚನಾಮೆಯನ್ನು ಮಹಿಬೂಬ್ ಸಾಬ್ ಹೇಳಿ ಬರೆಸಿರುತ್ತಾನೆ. ನಾವು ಪಂಚನಾಮೆಯನ್ನು ಹೇಳಿ ಬರೆಸಿರುವುದಿಲ್ಲ. ಪಂಚನಾಮೆ ಕಾಲಕ್ಕೆ ಕಟ್ಟಿಗೆಗಳನ್ನು ಜಪ್ತಿ

ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಸ್ವಂತ ಊರು ಹಿರೇರಾಯಕುಂಪಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮತ್ತು ಮಹಿಬೂಬ್ ಸಾಬ್ ನಡುವೆ ಸಂಬಂಧ ಇದೇ ಅಂದರೆ ಸರಿಯಲ್ಲ. ಚಾಸಾ-1 ನನ್ನ ಸಂಬಂಧಿಕರಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.